ಎಂ.ಎ. ಕುಮಾರ್, ಬೆಂಗಳೂರು

*ಮನುಷ್ಯ ಯಾವ ಸಮಯದಲ್ಲಿ ದಿಕ್ಕು ತಪ್ಪುತ್ತಾನೆ?*



ಜಿಪಿಎಸ್ ಕೈ ಕೊಟ್ಟ ಸಮಯದಲ್ಲಿ.

ಜಿ.ವಿ. ಪ್ರಭು, ಬೆಂಗಳೂರು

*ದೇವರ ಮುಂದೆ ನಿಂತು ಪ್ರಾರ್ಥಿಸುವ ಭಕ್ತ, ಸಮಾಜಸೇವೆ ಮಾಡುವ ಸೇವಕ. ಇಬ್ಬರಲ್ಲಿ ಯಾರು ಶ್ರೇಷ್ಠರು?*

ಸೇವಕನೇ. ಎಂದೋ ದೇವ ಮಾಡುವ ಒಳಿತಿಗಿಂತ ಆಗಲೇ ಸೇವಕ ಮಾಡುವ ಒಳಿತೇ ಶ್ರೇಷ್ಠ.

ಬಾ.ರಂ. ಸುರೇಶ, ಶಿವಮೊಗ್ಗ

*ಲಗ್ನವಾದಮೇಲೆ ಬೇರೆ ಹುಡುಗಿಯರನ್ನು ಕಂಡಾಗ ಇಷ್ಟು ಬೇಗ ಇವಳನ್ನು ಕಟ್ಟಿಕೊಳ್ಳಬಾರದಿತ್ತು ಎನಿಸುತ್ತದಲ್ಲಾ?*

ಎಂತಹ ಸೂಪರ್ ಜೋಡಿ ಸಾರ್ ನೀವು. ನಿಮ್ಮ ಹೆಂಡತಿಯದೂ ಇದೇ ಅಭಿಪ್ರಾಯ!

ಆರ್. ಮಧುಸೂದನ್, ಹಾಸನ

*ಕಣ್ಣೀರಿಗೂ, ತಣ್ಣೀರಿಗೂ ವ್ಯತ್ಯಾಸವೇನು ಗುರುಗಳೇ?*




ಆಸೆ ಆರಿದರೆ ಕಣ್ಣೀರು; ಬಾಯಾರಿದರೆ ತಣ್ಣೀರು!

ಟಿ.ಆರ್. ರವೀಂದ್ರ, ಬೆಂಗಳೂರು

*ಪ್ರೀತಿಸಿ ಮದುವೆಯಾಗಬೇಕೋ. ಮದುವೆಯಾಗಿ ಪ್ರೀತಿಸಬೇಕೋ?*

ಹೇಗಾದರೂ ಸರಿ. ಇಬ್ಬರಿಗೂ ಅನುಮಾನ ಬರದಂತೆ ನಡೆದುಕೊಳ್ಳುವುದು ಮುಖ್ಯ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ

*ಎಲ್ಲಾ ದೇವತೆಯರನ್ನೂ ಪೂಜಿಸುವ ನಾವು ನ್ಯಾಯದೇವತೆಯನ್ನೇಕೆ ಪೂಜಿಸುವುದಿಲ್ಲ?*

ಅದಕ್ಕೇ ವಕೀಲರೇ ಪೂಜಾರಿ, ಕಾಣಿಕೆ ದುಬಾರಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಎಮ್ಮೆಗೂ, ಎಮ್ಮೆಲ್ಲೆಗೂ ಇರುವ ವ್ಯತ್ಯಾಸವೇನು?*

ಎಮ್ಮೆ ಹುಲ್ಲು ತಿಂದು ಹಾಲು ಕೊಡುತ್ತದೆ; ಎಮ್ಮೆಲ್ಲೆ ಫುಲ್ ತಿಂದು ಹಾಳುಗೆಡವುತ್ತಾನೆ.

ಶಿವಮೊಗ್ಗ ರಮೇಶ್, ಮೈಸೂರು

*ಒಬ್ಬ ಯತಿಯ ಬದುಕಿನ ರಹಸ್ಯವೇನು?*

ಯ ಯಥೇಚ್ಛವಾದ; ತಿ ತಿಳುವಳಿಕೆ.

ಮೈಸೂರು ಕುಸುಮ, ಶ್ರವಣಬೆಳಗೊಳ

*ಸಂಸಾರದಲ್ಲಿ ಸಾಸಿವೆ ಕಾಳಿನಷ್ಟು ಸುಖಕ್ಕಾಗಿ ಸಾಗರದಷ್ಟು ದುಃಖ ಅಲ್ಲವೆ?*

ಛೆ! ಆ ಗೋಳು ಸೀರಿಯಲ್‌ಗಳನ್ನು ನೋಡುವುದನ್ನು ನಿಲ್ಲಿಸಿ; ದೃಷ್ಟಿ ಬದಲಾಗುತ್ತದೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಪ್ರಪಂಚದ ಮೊದಲ ನೇರಪ್ರಸಾರದ ವೀಕ್ಷಕವಿವರಣೆ ನೀಡಿದವರು ಯಾರು ರಾಂ?*

ಹಸ್ತಿನಾಪುರ 24/7 ಚಾನಲ್‌ನ ಪ್ರಧಾನ ಮತ್ತು ಏಕೈಕ ವರದಿಗಾರನಾದ ಸಂಜಯ.

ಮಲ್ಲನಗೌಡ ಪಾಟೀಲ, ರಂಭಾಪೂರ

*ಮೊದಲರಾತ್ರಿಯ ಸುಖಸಂತೋಷನೆಮ್ಮದಿ ನಂತರದ ದಿನಗಳಲ್ಲಿ ಸಿಗುವುದಿಲ್ಲ. ಏಕೆ?*

ಪ್ರತಿದಿನ ಹಾಸಿಗೆ ಹಾಸಿ, ಹಾಲು ಕೊಟ್ಟು, ತಿನ್ನಲು ಹಣ್ಣು, ಚಕ್ಕುಲಿ, ಮುಚ್ಚೋರೆಗಳನ್ನು ಇರಿಸುವ ಜನರ ಕೊರತೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಗಾಂಧಿವಾದಿಯ ವಿರುದ್ಧಾರ್ಥಕ ಪದ ಯಾವುದು ಸರ್?*

ರಾಹುಲ್‌ಗಾಂಧಿವಾದಿ!

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ನಾಯಿ ನಿಯತ್ತಿಗೆ ಹೆಸರಾಗಿದೆ. ರಾಜಕಾರಣಿ?*

ಕಚ್ಚಾಡುವುದಕ್ಕೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಜ್ಞಾನಕ್ಕೂ, ವಿಜ್ಞಾನಕ್ಕೂ ಏನು ವ್ಯತ್ಯಾಸ ಸರ್?*

ಜ್ಞಾನ ಜಗತ್ತು; ವಿಜ್ಞಾನ ಜಿಪಿಎಸ್.

## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

*ಹೆಂಗಸರೇಕೆ ಬೆನ್ನು ತೋರುವ ರವಿಕೆ ತೊಡುತ್ತಾರೆ?*

ಕಾಸು ಖರ್ಚಿಲ್ಲದೆ ಬೆನ್ನುಗಾವಲು ಪಡೆ ಹೆಚ್ಚಿಸಿಕೊಳ್ಳಲು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹೆಣ್ಣಿಗೂ ಹೆಣ್ಣೇ ಶತ್ರು; ಗಂಡಿಗೂ ಹೆಣ್ಣೇ ಶತ್ರು. ಏಕೆ?*

ಶತ್ರುತ್ವದಲ್ಲಾದರೂ ಸಮಾನತೆ ಹೊಂದುವ ಬಯಕೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹೆಣ್ಣಲ್ಲಿ ಗಂಡು ಹಾಗೂ ಗಂಡಲ್ಲಿ ಹೆಣ್ಣು ಹುಡುಕುವುದೇನನ್ನು?*

ಗಂಡಿನಲ್ಲಿ ಹೆಂಗರುಳನ್ನು, ಹೆಣ್ಣಿನಲ್ಲಿ ಪೌರುಷವನ್ನು!

ಎನ್. ಗೋಪಾಲರಾವ್, ಬೆಂಗಳೂರು

*ಮೊದಮೊದಲು ಪಿಸುದನಿಯಲ್ಲಿ ಕರೆದರೂ ಸ್ಪಂದಿಸಿ ಸನಿಹ ಬರುತ್ತಿದ್ದಳು; ಈಗ ಬೊಬ್ಬಿರಿದರೂ ಬರುತ್ತಿಲ್ಲವಲ್ಲಾ...?*



ಛೆ! ಆಕೆ ಸನಿಹ ಬಂದಾಗ ನೀವು ಬಿಡದಿ ಸ್ವಾಮಿಯಂತೆ ನಡೆದುಕೊಳ್ಳಬಾರದಿತ್ತು.

ಹೇಮಾವತಿ ಜೈನ್, ಬಳ್ಳಾರಿ

*ರಾಮ್ ಉತ್ತರ ಎಂದರೆ ಪ್ರಾಮಾಣಿಕತೆ, ಸತ್ಯಸಂಧತೆ, ವಚನಪಾಲನೆ, ಪ್ರಜೆಗಳ ಕ್ಷೇಮವೆ ಸಾರ್?*

ಆ ತಾಕತ್ತು ನನಗಿಲ್ಲ. ಚುಟುಕು, ಗುಟುಕು, ಮೊಟಕು, ಕುಟುಕಿನಿಂದ ನಗೆ, ನೆಮ್ಮದಿಯ ಎಟುಕು ಸಾಕು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಹಾವಿನ ಹೆಡೆಗೂ, ಹೆಣ್ಣಿನ ಜಡೆಗೂ ಇರುವ ವ್ಯತ್ಯಾಸವೇನು?*

ಹಾವಿನ ಹೆಡೆ ದೂರದ ಗುಹೆಯಲ್ಲಿ ನಿಧಿ ಕಾಯುತ್ತದೆ; ಹೆಣ್ಣಿನ ಜಡೆ ಬ್ಯೂಟಿ

■ ರಾಮ್